ಕರ್ನಾಟಕ ಸರ್ಕಾರ
(ಮೀನುಗಾರಿಕೆ ನಿರ್ದೇಶನಾಲಯ)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560 001
ದೂ:080-22864681/4604 ಫ್ಯಾಕ್ಸ್:080-22864619 ಇಮೇಲ್:dof-blr-ka@nic.in

ಸಂಖ್ಯೆ: DOF-TECH/ALL/2/255/2022 E-934788 ದಿನಾಂಕ:24.11.2022

## ಸುತ್ತೋಲೆ

**ವಿಷಯ:** ಇ-ಟೆಂಡರ್ ಪ್ರಕ್ರಿಯೆಯ ಡಿ.ಡಿ.ಗಳನ್ನು ಸ್ವೀಕರಿಸುವ ಸಮಯದ ಗಡುವಿನ ಕುರಿತು.

**ಉಲ್ಲೇಖ:** ಮೀನುಗಾರಿಕೆ ಸಹಾಯಕ ನಿರ್ದೇಶಕರು, ಚಿಂಚೋಳಿ ಇವರ ಪತ್ರ ಸಂಖ್ಯೆ/ಮೀಸನಿಚಿಂ/ಹಗುಪ/ಇ.ಟೆ.ಹ/01/2022-23 ದಿನಾಂಕ:18.11.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಚಿಂಚೋಳಿಯ ಇವರ ಉಲ್ಲೇಖಿತ ಪತ್ರದಲ್ಲಿ ಆರ್ಥಿಕ ಬಿಡ್ ನಲ್ಲಿ ಯಶಸ್ವಿಯಾಗಿ ಬಿಡ್ ಮಾಡಿದ ಅತಿ ಹೆಚ್ಚು ಮೊತ್ತ ನಮೂದಿಸಿದ ಬಿಡದಾರರಿಗೆ ಡಿ.ಡಿ ಕೊಡಲು ಅಂತಿಮ ಸಮಯ 18.11.2022 ರಂದು ಬೆಳಗ್ಗೆ 11:00 ಗಂಟೆ ಬದಲಿಗೆ ಅದೇ ದಿನದಂದು ಮಧ್ಯಾಹ್ನ 12:30 ಗಂಟೆಗೆ ಎಂದು ಬದಲಾವಣೆ ಮಾಡಿ ಬಿಡದಾರರಿಗೆ ತಿಳಿಸಲಾಗಿತ್ತು.

ಆದರೇ ಎರಡು ಕೆರೆಗಳ ಬಿಡದಾರರು ಸಂಬಂಧಪಟ್ಟ ಡಿ.ಡಿ.ಗಳನ್ನು ತಡವಾಗಿ ಮಧ್ಯಾಹ್ನ 1:15 ಗಂಟೆಗೆ ಹಾಗೂ ಇನ್ನೂ ಎರಡು ಕೆರೆಗಳ ಬಿಡದಾರರು ಡಿ.ಡಿ.ಗಳನ್ನು ತಡವಾಗಿ ಮಧ್ಯಾಹ್ನ 3:00 ಗಂಟೆಗೆ ಕಛೇರಿಗೆ ಸಲ್ಲಿಸಲು ಬಂದಿರುತ್ತಾರೆ. ಅವುಗಳನ್ನು ಸ್ವೀಕರಿಸಬಹುದೇ ಅಥವಾ ತಿರಸ್ಕರಿಸಿ ಎರಡನೇ ಅತಿ ಹೆಚ್ಚು ಬಿಡ್‌ದಾರರರಿಗೆ ಅವಕಾಶ ನೀಡಬೇಕೆ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಹಾಗೂ ಸದರಿ ಗರಿಷ್ಠ ಬಿಡದಾರರುಗಳ ಈ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಡಿ.ಡಿ. ಸ್ವೀಕರಿಸುವ ಅವಧಿಯನ್ನು ದಿನಾಂಕ:18.11.2022 ರ ಅಪರಾಹ್ನ 5:30 ಗಂಟೆಯವರೆಗೆ ವಿಸ್ತರಿಸಬಹುದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡಲು ಕೋರಿರುತ್ತಾರೆ.

**ಮೇಲಿನ ವಿಷಯದ ಬಗ್ಗೆ ಈ ಕೆಳಗಿನಂತೆ ಸ್ಪಷ್ಟೀಕರಣವನ್ನು ನೀಡಲಾಗಿದೆ.**

ಇ-ಟೆಂಡರ್ ಅಂತಿಮಗೊಳಿಸಿ ಯಶಸ್ವಿ ಬಿಡ್‌ದಾರರ ಘೋಷಣೆ - ಮೀನುಪಾಶುವಾರು ಹಕ್ಕಿನ ಇ-ಟೆಂಡರ್ ಮುಗಿದ ಕೂಡಲೇ ಅತೀ ಹೆಚ್ಚಿನ ಮೊತ್ತವನ್ನು ಸೂಚಿಸಿದ ಯಶಸ್ವಿ ಟೆಂಡರುದಾರರು ಈಗಾಗಲೇ ಪಾವತಿಸಿರುವ ಸರ್ಕಾರಿ ಸವಾಲ್ ನ (ಇ.ಎಂ.ಡಿ) ಮೊತ್ತವನ್ನು ಹೊರತುಪಡಿಸಿ ಉಳಿಕೆ ಬಿಡ್ ಮೊತ್ತವನ್ನು ಆರ್ಥಿಕ ಬಿಡ್ ತೆರೆದ 24 ಗಂಟೆಗಳೊಳಗೆ ಕಚೇರಿ ವೇಳೆಯಲ್ಲಿ **"ಮೀನುಗಾರಿಕೆ ಸಹಾಯಕ ನಿರ್ದೇಶಕರು, ಚಿಂಚೋಳಿ ತಾಲ್ಲೂಕು"** ಇವರ ಹೆಸರಿನಲ್ಲಿ ನಗದು ಹುಂಡಿ ಪಡೆದು, ಪಾವತಿ ಮಾಡಿ ಅಧಿಕೃತ ರಸೀದಿಯನ್ನು ಪಡೆದುಕೊಳ್ಳತಕ್ಕದ್ದು. ಇದರೊಂದಿಗೆ ಸದರಿ ಕೆರೆ/ ಜಲಸಂಪನ್ಮೂಲಕ್ಕೆ ನಿಗದಿಪಡಿಸಿದ ಭದ್ರತಾ ಠೇವಣಿಯ ಮೊತ್ತಕ್ಕೆ ಪ್ರತ್ಯೇಕ ನಗದು ಹುಂಡಿ ಪಡೆದು ಪಾವತಿಸತಕ್ಕದ್ದು ಎಂದು ಕೆರೆ/ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಸಂಬಂಧ ಮಾದರಿ ಇ-ಟೆಂಡರ್ ದಸ್ತಾವೇಜಿ ನಲ್ಲಿರುತ್ತದೆ.

ಪು.ತಿ.ನೋ

**Kempu.**

ಆರ್ಥಿಕ ಬಿಡ್ ನಲ್ಲಿ ಯಶಸ್ವಿಯಾಗಿ ಬಿಡ್ ಮಾಡಿದ ಅತಿ ಹೆಚ್ಚು ಮೊತ್ತ ನಮೂದಿಸಿದ ಬಿಡದಾರರಿಂದ ಡಿ.ಡಿ ಪಡೆಯಲು ಆರ್ಥಿಕ ಬಿಡ್ ತೆರೆದ 24 ಗಂಟೆಗಳೊಳಗೆ ಕಚೇರಿ ವೇಳೆಯಲ್ಲಿ ಎಂದಿದ್ದು, ಕೆಲವೊಮ್ಮೆ ಡಿ.ಡಿ ಗಳನ್ನು ಪಡೆಯಲು ತಾಂತ್ರಿಕ ತೊಂದರೆ ಆಗುವ ಸಾಧ್ಯತೆ ಇದ್ದು, ಆರ್ಥಿಕ ಬಿಡ್ ತೆರೆದ ಮರುದಿನದ ಕಛೇರಿ ಸಮಯ ಅಂತ್ಯದೊಳಗೆ ಅಂದರೆ ಸಂಜೆ 5.30 ರೊಳಗೆ **(ಮುಂದಿನ ಕಾರ್ಯ ದಿನದಂದು - Next working Day)** ಎಂದು ಪರಿಗಣಿಸಲು ತಿಳಿಸಲಾಗಿದೆ.

ಸಹಿ/-

ಮೀನುಗಾರಿಕೆ ನಿರ್ದೇಶಕರು

ಗೆ,

ಪ್ರತಿ: ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು

ಪ್ರತಿ: ಎಲ್ಲಾ ಜಿಲ್ಲಾ ಮಟ್ಟದ ಮೀನುಗಾರಿಕೆ ಉಪ ನಿರ್ದೇಶಕರು

ಪ್ರತಿ: ಎಲ್ಲಾ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರು **(ಜಿಲ್ಲಾ ಮಟ್ಟದ ಮೀನುಗಾರಿಕೆ ಉಪ ನಿರ್ದೇಶಕರು ಕಛೇರಿಯ ಮುಖಾಂತರ )**

ಮೀನುಗಾರಿಕೆ ನಿರ್ದೇಶಕರ ಪರವಾಗಿ

2n/11/2022

**Kempu.**